ಸಣ್ಣತಿಮ್ಮಯ್ಯನಿಗೆ ಸೋಜಿಗವಾಯಿತು! ಕುರಿಗಳು ತನ್ನ ಮುಂದೆಯೇ ಹೋದರೂ ತನ್ನ ಬಿಳಿಕುರಿ ಯಾಕೆ ತನ್ನ ಬಳಿ ಬರಲಿಲ್ಲ! ಹಿಂದೆಲ್ಲಾ ಬಿಳಿಕುರಿ ತನ್ನನ್ನು ನೋಡಿದ ಕೂಡಲೇ ಓಡೋಡಿ ಬಂದು ತನ್ನ ತೆಕ್ಕೆಗೆ ಜೋತು ಬೀಳುತ್ತಿತ್ತು. ಆದರೆ ಇಂದ್ಯಾಕೆ ಅದು ಬರಲಿಲ್ಲ! ಎಂದು ಮತ್ತೊಮ್ಮೆ ಗೂಡಿನತ್ತ ಹೋಗುತ್ತಿದ್ದ ಕುರಿಗಳತ್ತ ನುಗ್ಗಿ ಬಾರಾಡಿ ನೋಡಿದ. ಆದರೆ ಆ ಮಬ್ಬು ಕತ್ತಲಿನಲ್ಲಿ ಅವನ ಕೈಗೂಸಿನಂತಿದ್ದ ಬಿಳಿಕುರಿ ಕಾಣಲಿಲ್ಲ! 'ಅಪ್ಪಾ ಎಲ್ಲಿ ಬಿಳಿಕುರಿ ಕಾಣ್ತಿಲ್ಲ!' 'ಅಲ್ಲೇ ಎಲ್ಲೋ ಐತೆ ಬರ್ಲ. ಅಂಗೆ ಬಾರಾಡಬೇಡ. ನಿನ್ನ ಬಿಳಿಕುರಿ ಎಲ್ಲಿಗೂ ಹೋಗಲ್ಲ...', 'ಇಲ್ಲ ಕಣಪ್ಪೋ.. ಬಿಳಿಕುರಿ ಎಲ್ಲೂ ಕಾಣ್ತಿಲ್ಲ! ಎಲ್ಲ ತಾಯಿಗುರಿಗಳ ಹತ್ತಿರವೂ ನೋಡಿದೆ! ಗಿರಿಂಡೆಗುಡ್ಡದಿಂದ ಕುರಿಗಳನ್ನೆಲ್ಲಾ ಸರಿಯಾಗಿ ನೋಡಿಕೊಂಡು ಹೊಡಕೊಂಡು ಬಂದಾ ಹೆಂಗೆ?' 'ಹೂಕಣ್ಲಾ ಸಣ್ಣೋನೆ, ನಾನೇ ಕುರಿಗಳನ್ನೆಲ್ಲಾ ಹೊಡೆದುಕೊಂಡು ಬಂದು ಬುಡ್ಡನಕಟ್ಟೆಯಲ್ಲಿ ನೀರು ಕುಡಿಸಿಕೊಂಡು ಬಂದ್ದಿದ್ದೀನಿ! ನನಗೇನೂ ಗ್ಯಾನ ಇಲ್ಲವಾ! ಅಲ್ಲೇ ಸರಿಯಾಗಿ ನೋಡೋ ಇರಬೋದು' ಅಪ್ಪ ಹಾಗೆಂದು ಹೇಳಿದ ಕೂಡಲೆ ಸಣ್ಣತಿಮ್ಮಯ್ಯ ಮತ್ತೊಮ್ಮೆ ಇಡೀ ಗೂಡನ್ನು ಬಾರಾಡಿ ನೋಡಿದ. ಆದರೆ ಅವನ ಬಿಳಿಕುರಿ ಮಾತ್ರ ಯಾವ ತಾಯಿಗುರಿಗಳ ಹತ್ತಿರವೂ ಕಾಣಲಿಲ್ಲ. ಬಿಳಿಕುರಿ ಮೇಲೆ ಪ್ರಾಣವನ್ನೇ ಇಟ್ಟುಕೊಂಡಿದ್ದ ತನ್ನ ಮಗ ಸಣ್ಣತಿಮ್ಮಯ್ಯನ ಗಾಬರಿಯನ್ನು ನೋಡಲಾಗದೆ ಗಿರಿಗೌಡನೂ ಒಮ್ಮೆ ಗೂಡನ್ನೆಲ್ಲಾ ತಡಕಿದ. ಆದರೆ ಯಾವ ತಾಯಿಗುರಿಗಳ ಬಳಿಯಲ್ಲೂ ಬಿಳಿಕುರಿಯ ಸುಲಾಕೆ ಇರಲಿಲ್ಲ! 'ಹ್ಹೂ ಕಣ್ಲ ಸಣ್ಣೋನೆ. ಬಿಳಿಕುರಿ ಎಲ್ಲೋ ಕಾಂಬ್ತಿಲ್ಲ!' ಎಂದು ಸಣ್ಣಗೆ ಉಸುರಿದ. ಮೊದಲಿನ ಜಬರದಸ್ತು ಅವನ ಧ್ವನಿಯಲ್ಲಿರಲಿಲ್ಲ! ಅಪ್ಪನ ಮಾತಿನಿಂದ ಸಣ್ಣತಿಮ್ಮಯ್ಯನ ತಳಮಳ ಇನ್ನಷ್ಟು ಹೆಚ್ಚಾಯಿತು. 'ಅಂಗಾದ್ರೆ, ನೀನು ಇಲ್ಲೇ ಇರು. ಗಿರಿಂಡೆಗುಡ್ಡಕ್ಕೆ ಹೋಗಿ ನೋಡಿ ಕೊಂಡುಬತ್ತೀನಿ' ಎಂದು ಚೂಡಿ ಹಚ್ಚಲು (ತೆಂಗಿನ ಗರಿಯ ದೊಂದಿ) ಆಕಡೆ ಈಕಡೆ ನೋಡುತ್ತಿದ್ದ, ಹೊರಡಲು ಮುಂದಾದ. ಸಣ್ಣತಿಮ್ಮಯ್ಯನ ಬಗ್ಗೆ ಅರಿವಿದ್ದ ಗಿರಿಗೌಡ 'ಲೇ ಸಣ್ಣೋನೆ ರವ್ವೋಟು ಸುಮ್ಕಿರ್ಲಾ. ಆತರ್ಕೆ ಹುಟ್ಟಿದೋನಂಗೆ ಆಡಬೇಡ! ನಿನ್ನ ಬಿಳಿಕುರಿ ಎತ್ಲಾಗೂ ಹೋಗಾಕಿಲ್ಲ..' ಎಂದು ಅವನನ್ನು ಸಮಾಧಾನಪಡಿಸಿದ. 'ಇಲ್ಲಾ ಬುಡು. ನಾನೇ ಹೋಗಿ ಹುಡುಕ್ಕೊಂಡು ಬತ್ತೀನಿ' ಸಣ್ಣತಿಮ್ಮಯ್ಯ ಕೊನೆ ತೀರ್ಮಾನದಂತೆ ಹೇಳಿದ. ನಿಂತಲ್ಲಿ ನಿಲ್ಲದೆ, ಕುಂತಲ್ಲಿ ಕೂಡದೆ ಬಾರಾಡ ತೊಡಗಿದ. ಹೇಗೆ ನೋಡಿದರೂ ತಮ್ಮ ಕುರಿಗೂಡು ಖಾಲಿಯಾದಂತೆ ಕಾಣಿಸುತ್ತಿತ್ತು. ತಮ್ಮ ಅಕ್ಕಪಕ್ಕದಲ್ಲೇ ಇದ್ದ ನೆರೆಹೊರೆಯವರ ಕುರಿಗೂಡಿಗೂ ಚೂಡಿ ಹಿಡಿದು ಹೋಗಿ ನೋಡಿಕೊಂಡು ಬಂದ. ಆದರೂ ಯಾರ ಕುರಿಗೂಡಿನಲ್ಲೂ ಬಿಳಿಕುರಿಯ ಸುಳಿವಿರಲಿಲ್ಲ! ಒಮ್ಮೆಲೆ ಅವನಿಗೆ ಇಡೀ ಹಟ್ಟಿಯೇ ತಮಾಮ್ ಖಾಲಿಯಾದಂತೆ ಅನ್ನಿಸಿತು. ಮತ್ತೆ ಏನನ್ನೋ ನೆನಪಿಸಿಕೊಂಡವನಂತೆ 'ಅಪ್ಪಾ, ಒಂದು ಕೆಲ್ಸ ಮಾಡ್ಲಾ...' ಅಂದ. 'ಏನ್ಲಾ ಅದು?' 'ಏನಿಲ್ಲಾ ಪೆಟ್ಟಿಗೆದೇವರ ಹತ್ತಿರ ಹೋಗಿ ಮೊಗ್ಗು ಕೇಳಿದರೆ ಹೆಂಗೆ?' ಎಂದು ಸಂಪೂರ್ಣ ಭರವಸೆಯಿಂದ ಮೆಲ್ಲಗೆ ಉಸುರಿದ. ಗಿರಿಗೌಡನಿಗೆ ಒಂದು ಕುರಿಮರಿಗಾಗಿ ಪೆಟ್ಟಿಗೆ ದೇವರ ತನಕ ಯಾಕೆ ಅನಿಸಿ 'ಅಲ್ಲಿನತನಕ ಬ್ಯಾಡ ಬಿಡ್ಲಾ ಸಣ್ಣೋನೆ. ಪರಮ ಎಲ್ಲಿಗೂ ಹೋಗಿಲ್ಲ ಬಿಡ್ಲ ಇಲ್ಲೇ ಎಲ್ಲೋ ಐತೆ' ಎಂದು ತನ್ನ ಹಿರಿತನಕ್ಕೆ ಅನುಗುಣವಾಗಿ ಸಮಾಧಾನದ ಮಾತುಗಳನ್ನಾಡಿದ. ಆಗ ಸಣ್ಣತಿಮ್ಮಯ್ಯನಿಗೆ ಏನೋ ತೋಚಿದಂತಾಗಿ 'ಅಪ್ಪಾ ಗುಡ್ಡುತಾವ ಎಲ್ಲಾದರೂ ನಮ್ಮ ಕುರಿಗಳು ಬೇರೆಯವರ ಪಾಲಿನೊಂದಿಗೆ ಕಲೆತಿದ್ದವಾ?.. ನೆಪ್ಪು ಮಾಡಿಕೊ!' ಎಂದು ಕೇಳಿದ. ಮಗನ ಮಾತನ್ನು ಕೇಳಿಸಿಕೊಂಡರೂ ಕೇಳಿಸಿ ಕೊಳ್ಳದಂತೆ ಕುಳಿತಿದ್ದ ಗಿರಿಗೌಡ ಇದ್ದಕ್ಕಿದ್ದಂತೆ ಏನೋ ಹೊಳೆದಂತಾಗಿ 'ಹೂ ಕಣ್ಲ ಸಣ್ಣೋನೆ, ಅದೇ ಗುಡ್ಡುತಾವಿಂದ

